**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 5**

**ಚಾಸಾ –8**

ಸಾಕ್ಷಿಯ ಹೆಸರು– ಪೆಮ್ಮಯ್ಯ

ತಂದೆಯ ಹೆಸರು – ಅಪ್ಪಯ್ಯ

ವಯಸ್ಸು – 58 ವರ್ಷ

ವೃತ್ತಿ – ವ್ಯವಸಾಯ

ವಿಳಾಸ – ಕೆ ಬಾಡಗ ಗ್ರಾಮ

ದಿಃ 04.10.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 7 ನನ್ನ ಅಣ್ಣ. ಮಳವಂಡ ಪೂಣಚ್ಚ ನನ್ನ ಅಣ್ಣ. ನನಗೆ ಚಾಸಾ 5 ರವರ ಪರಿಚಯ ಇಲ್ಲ. ನನಗೆ ಈಗ ವಿಡಿಯೋ ಕಾನ್ಫರನ್ಸ್ ಮೂಲಕ ತೋರಿಸಿದ ಆರೋಪಿಗಳ ಪರಿಚಯ ಇಲ್ಲ. ಈಗ್ಗೆ 2 ವರ್ಷಗಳ ಹಿಂದೆ ನಾನು ಮನೆಯಲ್ಲಿ ಇದ್ದಾಗ ಪೊಲೀಸರು ಬಂದು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಈಗ ತೋರಿಸಿದ ನೋಟೀಸಿನಲ್ಲಿ ನನ್ನ ಸಹಿ ಇದೆ. ಸದರಿ ನೋಟೀಸನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 10(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿ ತನ್ನ ಸಹಿ ಗುರುತಿಸಿದ ದಾಖಲೆ ನಿಪಿ 5 ಸ್ಥಳ ಮಹಜರು ಆಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5(ಸಿ) ಎಂದು ಗುರುತಿಸಲಾಯಿತು. ನಿಪಿ 5 ರಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿಲ್ಲ. ಪೊಲೀಸ ಕೋರಿಕೆಯ ಮೇರೆಗೆ ನಿಪಿ 5 ರಲ್ಲಿ ಸಹಿ ಮಾಡಿದ್ದೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತು ಮಾಡಿರುವುದಿಲ್ಲ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ನಾನು ಕಾಣಿಸುತ್ತಿದ್ದೇನೆ. ಸದರಿ ಛಾಯಾಚಿತ್ರಗಳನ್ನು ಈಗಾಗಲೇ ನಿಪಿ 6 ಹಾಗೂ 7 ಎಂದು ಗುರುತಿಸಲಾಗಿದೆ. ನಿಪಿ 6 ಹಾಗೂ 7 ರಲ್ಲಿ ಪೊಲೀಸರು, ನಾನು ಹಾಗೂ ಚಾಸಾ 7 ಕಾಣಿಸುತ್ತಿದ್ದೇವೆ. ನಿಪಿ 6 ಹಾಗೂ 7 ರಲ್ಲಿ ಕಾಣಿಸುತ್ತಿರುವ ಇನ್ನೊಬ್ಬ ವ್ಯಕ್ತಿಯ ಪರಿಚಯ ನನಗೆ ಇಲ್ಲ, ಆತ ಯಾರು

ಎಂದು ನನಗೆ ಗೊತ್ತಿಲ್ಲ. ನಿಪಿ 6 ಹಾಗೂ 7 ನ್ನು ಪೊಲೀಸರು ಪೂಣಚ್ಚ ರವರ ಲೈನ್ ಮನೆಯ ಬಳಿ ತೆಗೆದಿರುತ್ತಾರೆ ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ದಿಃ 04.03.2022 ರಂದು ಬೆಃ 10.35 ಗಂಟೆಗೆ ನಾನು ಮಳವಂಡ ಪೂಣಚ್ಚ ರವರ ಲೈನ್ ಮನೆಯ ಬಳಿ ಇದ್ದಾಗ ವಿರಾಜಪೇಟೆ ಪೊಲೀಸರು ಅಲ್ಲಿಗೆ ಬಂದು ದಿಃ 02.03.2022 ರಂದು ರಾತ್ರಿ ಮಳವಂಡ ಪೂಣಚ್ಚ ರವರ ಲೈನ್ ಮನೆಯಲ್ಲಿ ವಾಸವಿದ್ದ ಕುಳಿಯನ ಪತ್ನಿ ಚಿಮ್ಮಿಯೊಂದಿಗೆ ಮಂಜು ಅಲಿಯಾಸ್ ಸುರೇಶ ಎನ್ನುವಾತ ಜಗಳ ತೆಗೆದು ಆಕೆಯನ್ನು ಕೊಲ್ಲುವ ಉದ್ದೇಶದಿಂದ ಆಕೆಯ ಕುತ್ತಿಗೆಯ ಭಾಗಕ್ಕೆ ಕಡಿದು ಹಲ್ಲೆ ಮಾಡಿ ದಿಃ 03.03.2022 ರಂದು ಪಣಿಯರವರ ಮಂಜು ರವರಿಂದ ವಿಷಯ ತಿಳಿದು ಚಿಮ್ಮಿ ಯನ್ನು ಆಕೆಯ ಮಗಳು ಬೇಬಿ, ಬೇಬಿಯ ಗಂಡ ಚುಬ್ಬ ಹಾಗೂ ಕುಳಿಯ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಈ ಬಗ್ಗೆ ಪ್ರಕರಣ ದಾಖಲಾಗಿರುವ ವಿಷಯ ತಿಳಿಸಿ ಕೃತ್ಯ ಸ್ಥಳದ ಮಹಜರು ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿ ನಿಪಿ 10 ರಂತೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ 7 ಪೂಣಚ್ಚ ರವರ ಲೈನ್ ಮನೆಯ ಹತ್ತಿರ ಇದ್ದಾಗ ಅಲ್ಲಿ ಪಣಿಯರವರ ಮಂಜು - ಚಾಸಾ 5 ಇದ್ದು, ಆತ ಪೂಣಚ್ಚ ರವರ ಲೈನ್ ಮನೆಗೆ ಕರೆದುಕೊಂಡು ಹೋಗಿ ಕೃತ್ಯ ಸ್ಥಳವನ್ನು ತೋರಿಸಿ ಮಧ್ಯ ಭಾಗದ ಕೋಣೆಯಲ್ಲಿ ಬಿದ್ದಿದ್ದ ಒಂದು ಮಾಸಲು ಬಣ್ಣದ ರಕ್ತ ಮಿಶ್ರಿತ ಟವಲನ್ನು ತೋರಿಸಿ ನಾನು ಸ್ಥಳಕ್ಕೆ ಬಂದಾಗ ಚಿಮ್ಮಿಯ ಕುತ್ತಿಗೆಗೆ ಗಾಯವಾದ ಭಾಗಕ್ಕೆ ಸುತ್ತಿಕೊಂಡಿದ್ದ ಬಟ್ಟೆಯಾಗಿರುವುದಾಗಿ ತಿಳಿಸಿ ಪೊಲೀಸರ ಸಮಕ್ಷಮ ಹಾಜರುಪಡಿಸಿದ್ದು ಸದರಿ ಬಟ್ಟೆಯನ್ನು ಪೊಲೀಸರು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ ಸುತ್ತಿ ಹೊಲಿದು ಎ ಎಂಬ ಅಕ್ಷರದ ಅರಗು ಸೀಲು ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಆ

ಸಮಯದಲ್ಲಿ ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ 5 ರಂತೆ ಮಹಜರನ್ನು ಮಃ 11.00 ರಿಂದ 1.00 ಗಂಟೆಯವರೆಗೆ ತಯಾರಿಸಿ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 5 ಮಹಜರು ಮಾಡುವ ಸಮಯದಲ್ಲಿ ನಿಪಿ 6 ಮತ್ತು 7 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಚಂಗಪ್ಪ ರವರ ಲೈನ್ ಮನೆಯಲ್ಲಿ ವಾಸವಿದ್ದ ಮಂಜು ಅಲಿಯಾಸ್ ಸುರೇಶ್ ಬೆಳಿಗ್ಗೆ ಮನೆ ಬಿಟ್ಟು ಹೋಗಿದ್ದರಿಂದ ಆತನೇ ಯಾವುದೇ ದುರುದ್ದೇಶದಿಂದ ಚಿಮ್ಮಿ ಯನ್ನು ಕೊಲೆ ಮಾಡಿರಬಹುದು ಎಂಬ ಸಂಶಯದಿಂದ ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 04.03.2022 ರಂದು ನನಗೆ ಈಗ ಓದಿ ಹೇಳಿದಂತೆ " ನಾನು —— ಸಂಶಯವಿರುತ್ತದೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 13 ಎಂದು ಗುರುತಿಸಲಾಯಿತು. ನಿಪಿ 13 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).</u>**
**<u>ಎಸ್.ಸಿ. ನಂ. 5017/2022</u>**

**ಪ್ರಾಸಾ -- 6**

**ಚಾಸಾ –9**

ಸಾಕ್ಷಿಯ ಹೆಸರು– ನಿತಿನ್

ತಂದೆಯ ಹೆಸರು – ರವಿ

ವಯಸ್ಸು – 28 ವರ್ಷ

ವೃತ್ತಿ – ಡ್ರೈವರ್

ವಿಳಾಸ – ಹುದಿಕೇರಿ

ದಿಃ 04.10.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>**

1. ನನಗೆ ಚಾಸಾ 10 ಹಾಗೂ 11 ರವರ ಪರಿಚಯ ಇದೆ. ದಿಃ 08.03.2022 ರಂದು ನನ್ನನ್ನು, ಚಾಸಾ 10 ಹಾಗೂ 11 ರವರು ಪೊಲೀಸರು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗರದಲ್ಲಿ ಒಬ್ಬ ಮಹಿಳೆಯ ಮೃತದೇಹ ನೋಡಿದ್ದೆ. ಆಕೆಯ ಕತ್ತಿನ ಬಳಿ ಗಾಯ ಆಗಿತ್ತು. ಪೊಲೀಸರು ಶವದ ಬಳಿ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದರು. ಸದರಿ ಮೃತದೇಹ ಚಿಮ್ಮಿ ಎನ್ನುವ ಮಹಿಳೆಯದ್ದು ಎಂದು ಹೇಳಿದರು. ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ 2 ಹಾಗೂ 3 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಇನ್ನೆರಡು ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ 14 ಹಾಗೂ 15 ಎಂದು ಗುರುತಿಸಲಾಯಿತು. ಪೊಲೀಸರು ಆಕೆ ಹೇಗೆ ಮೃತಪಟ್ಟಿರುತ್ತಾರೆ, ಯಾರು ಆಕೆಯನ್ನು ಕೊಲೆ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ. ನಾವು ಆ ಮಹಿಳೆಯ ಸಾವಿಗೆ ಕಾರಣ ಏನು ಎಂದು ಪೊಲೀಸರ ಬಳಿ ವಿಚಾರಿಸಿರಲಿಲ್ಲ. ಪೊಲೀಸರು ಅಲ್ಲಿ ದಾಖಲೆಗಳನ್ನು ಬರವಣಿಗೆ ಮಾಡಿ ನನ್ನ, ಚಾಸಾ 10 ಹಾಗೂ 11 ರವರ ಸಹಿಗಳನ್ನು ಪಡೆದುಕೊಂಡರು. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿ ತನ್ನ ಸಹಿ ಗುರುತಿಸಿದ ದಾಖಲೆ ನೋಟೀಸು ಆಗಿದ್ದು ಅದನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿ ತನ್ನ ಸಹಿ ಗುರುತಿಸಿದ ದಾಖಲೆ ಶವ

ಮಹಜರು ಆಗಿದ್ದು, ಸದರಿ ಶವ ಮಹಜರನ್ನು ನಿಪಿ 17 ಎಂದು ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ನಿಪಿ 17 ರಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ದಿಃ 08.03.2022 ರಂದು ಮೈಸೂರಿನ ಕೆ ಆರ್ ಆಸ್ಪತ್ರೆಯ ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಪೊಲೀಸರು ನನ್ನ, ಚಾಸಾ 10 ಹಾಗೂ 11 ರವರ ಸಮಕ್ಷಮ, ದಿಃ 02.03.2022 ರಂದು ರಾತ್ರಿ ಚಿಮ್ಮಿರವರು ಪೂಣಚ್ಚ ರವರ ಲೈನ್ ಮನೆಯಲ್ಲಿ ಮಂಜು ಅಲಿಯಾಸ್ ಸುರೇಶ್ ಹಾಗೂ ಇನ್ನೊಬ್ಬ ವ್ಯಕ್ತಿ ಸೇರಿಕೊಂಡು ದುರುದ್ದೇಶದಿಂದ ಆಕೆ ವಾಸವಿದ್ದ ಲೈನ್ ಮನೆಗೆ ಹೋಗಿ ಆಕೆಯೊಂದಿಗೆ ಜಗಳ ಮಾಡಿ ಕೊಲೆ ಮಾಡುವ ಉದ್ದೇಶದಿಂದ ಆಕೆಯ ಕುತ್ತಿಗೆಯ ಭಾಗಕ್ಕೆ ಕತ್ತಿಯಿಂದ ಕಡಿದ ಪರಿಣಾಮ ಆಕೆ ಮಾರಣಾಂತಿಕವಾಗಿ ಗಾಯಗೊಂಡು ನಂತರ ಆಕೆ ಚಿಕಿತ್ಸೆ ಫಲಕಾರಿಯಾಗದೇ ದಿಃ 07.03.2022 ರಂದು ರಾತ್ರಿ 9.13 ಗಂಟೆಗೆ ಮೃತಪಟ್ಟಿರುವುದಾಗಿ ನಮಗೆ ಹೇಳಿ ಮೃತ ಚಿಮ್ಮಿ ರವರ ಶವ ತನಿಖಾ ಮಹಜರನ್ನು ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡು ನಿಪಿ 16 ರಂತೆ ನೋಟೀಸು ನೀಡಿ, ಆಕೆಯ ಶವವನ್ನು ಪರಿಶೀಲನೆ ಮಾಡಿ ನಿಪಿ 17 ರಂತೆ ಶವ ತನಿಖಾ ಮಹಜರನ್ನು ಮಃ 12.00 ರಿಂದ 3.00 ಗಂಟೆಯವರೆಗೆ ಬರವಣಿಗೆ ಮಾಡಿ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 16 ಹಾಗೂ 17 ರಲ್ಲಿ ಬರೆದಿರುವ ಎಲ್ಲಾ ವಿವರಗಳು ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)